ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	621
2	ಸದಸ್ಯರ ಹೆಸರು	:	ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸುವ ದಿನಾಂಕ	:	23-09-2021
4	ಉತ್ತರಿಸುವವರು	:	ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮಾರುತಿ ಲೇಔಟ್ ಮತ್ತು ಬಸಾಪುರ ಗ್ರಾಮದಿಂದ ಹೊಸರೋಡ್‌ಗೆ ಹೋಗುವ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿರುವುದು ಮತ್ತು ಕೇಬಲ್ ಅಳವಡಿಸಲು ರಸ್ತೆಯನ್ನು ಅಗೆದಿರುವುದು ಮತ್ತು ಡಾಂಬರೀಕರಣ ಇಲ್ಲದೇ ರಸ್ತೆ ಹದಗೆಟ್ಟು ಹಲವಾರು ಸಾರ್ವಜನಿಕರಿಗೆ ಅಪಘಾತಗಳಾಗುತ್ತಿರುವುದು ಮತ್ತು ಸಾರ್ವಜನಿಕರು ಓಡಾಡಲು ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಾರುತಿ ಲೇಔಟ್ ಮತ್ತು ಬಸಾಪುರ ಗ್ರಾಮದಿಂದ ಹೊಸರೋಡ್‌ಗೆ ಹೋಗುವ ಪ್ರದೇಶದ ರಸ್ತೆಗಳು ಆರ್ಟೀರಿಯಲ್, ಸಬ್-ಆರ್ಟೀರಿಯಲ್ ರಸ್ತೆಗಳಾಗಿರುವುದಿಲ್ಲ. ಸದರಿ ಪ್ರದೇಶಗಳ ರಸ್ತೆಗಳಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 110 ಹಳ್ಳಿಗಳ ಯೋಜನೆಯಡಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ಅಳವಡಿಸಲು ರಸ್ತೆ ಕತ್ತರಿಸಿರುವುದು ಹಾಗೂ ಇತರೆ ಅನುಸಾಧನ ಅಳವಡಿಸುವ ಸಂಸ್ಥೆಗಳು / ಕಂಪನಿಗಳು ಕೇಬಲ್ ಅಳವಡಿಸಲು ಸಹ ರಸ್ತೆಯನ್ನು ಕತ್ತರಿಸುತ್ತಿರುತ್ತವೆ. ಆದುದರಿಂದ, ಡಾಂಬರೀಕರಣ ಇಲ್ಲದೇ ರಸ್ತೆ ಗುಂಡಿಗಳು ಹೆಚ್ಚಾಗಿರುವುದು / ಹದಗೆಟ್ಟು ಸಾರ್ವಜನಿಕರು ಮತ್ತು ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ	ಬಂದಿದ್ದಲ್ಲಿ, ಸದರಿ ರಸ್ತೆಯ ಗುಂಡಿಗಳನ್ನು ಮುಚ್ಚುವ ಕೆಲಸವನ್ನು ಯಾವಾಗ ಆರಂಭಿಸಲಾಗುವುದು ಹಾಗೂ ರಸ್ತೆಯ ಡಾಂಬರೀಕರಣವನ್ನು ಯಾವಾಗ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಓಡಾಡುವ ಅನುಕೂಲ ಮಾಡಿಕೊಡಲಾಗುವುದು;	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೊಳವೆ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿ ಮತ್ತು ಕೊಳವೆ ಪರೀಕ್ಷೆ ಪೂರ್ಣಗೊಂಡು ಮತ್ತೆ ಯಾವುದೇ ರಸ್ತೆ ಕತ್ತರಿಸುವ ಪ್ರಕರಣವಿಲ್ಲವೆಂದು ಜಲಮಂಡಳಿಯಿಂದ ಧೃಢೀಕರಣ ಪಡೆಯಬೇಕಾಗಿರುತ್ತದೆ. ತದನಂತರ, ಬಸಾಪುರ ಮುಖ್ಯರಸ್ತೆಯನ್ನು ಹೊಸೂರು ಮುಖ್ಯರಸ್ತೆಯಿಂದ ಬಿಬಿಎಂಪಿ ವ್ಯಾಪ್ತಿಯವರೆಗೆ ರಸ್ತೆ ಡಾಂಬರೀಕರಣವನ್ನು ಕೈಗೊಂಡು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 2020-21ನೇ ಸಾಲಿನ ಪಾಲಿಕೆ ಆಯವ್ಯಯದ ಅನುದಾನದಡಿ ಮಾನ್ಯ ಬೆಂಗಳೂರು ನಗರ ಉಸ್ತುವಾರಿ ಸಚಿವರ ವಿವೇಚನೆಗೆ ಒಳಪಟ್ಟ ಲೆಕ್ಕ ಶೀರ್ಷಿಕೆ ಅಡಿ "Improvements to footpath ; Drain and Asphalting to Basapura Main road from Hosur Road and BBMP Limits" ಕಾಮಗಾರಿಗೆ ರೂ.300.00 ಲಕ್ಷಗಳನ್ನು ಮೀಸಲಿರಿಸಿ ದಿನಾಂಕ: 03.02.2021 ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ.

		ಪ್ರಸ್ತುತ ಸದರಿ ರಸ್ತೆಯನ್ನು ಕೊಳವೆ ಅಳವಡಿಸಲು ಕತ್ತರಿಸಿರುವುದರಿಂದ ಸದರಿ ರಸ್ತೆ ಗುಂಡಿಗಳನ್ನು ಮುಚ್ಚಲಾಗದ ಪರಿಸ್ಥಿತಿ ಇದ್ದು, ಹೊಸದಾಗಿ ರಸ್ತೆ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ದಿನಾಂಕ: 31.10.2021 ರೊಳಗಾಗಿ ಬಿಬಿಎಂಪಿ ವತಿಯಿಂದ ಆರಂಭಿಸಲು ಕ್ರಮವಹಿಸಲಾಗುತ್ತದೆ. ಬಸಾಪುರ ಮುಖ್ಯರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಮಾರುತಿ ಲೇಔಟ್‌ನ ಕಾಮಗಾರಿಗಳು 110 ಹಳ್ಳಿಗಳಿಗೆ ಒಳಪಡುವ ಕಾಮಗಾರಿಗಳಲ್ಲಿ ಸೇರ್ಪಡೆಗೊಂಡಿರುತ್ತವೆ. ಪ್ರಸ್ತುತ ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ಚಾಲನೆಯಲ್ಲಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತದೆ.
ಇ	ಮಾರುತಿ ಲೇಔಟ್ ಮತ್ತು ಬಸಾಪುರ ಗ್ರಾಮವು ಬಿ.ಬಿ.ಎಂ.ಪಿ.ಗೆ ಸೇರಿದ್ದರೂ ಬಡಾವಣೆಗಳಲ್ಲಿ ಕಾವೇರಿ ಕುಡಿಯುವ ನೀರು ಸರಬರಾಜು ಮತ್ತು ಶುದ್ಧ ನೀರಿನ ಘಟಕ ಹಾಗೂ ಒಳಚರಂಡಿ ವ್ಯವಸ್ಥೆ ಇಲ್ಲದೇ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಾರುತಿ ಲೇಔಟ್ ಮತ್ತು ಬಸಾಪುರ ಗ್ರಾಮವು ಬಿ.ಬಿ.ಎಂ.ಪಿ ವ್ಯಾಪ್ತಿಗೆ ಒಳಪಟ್ಟಿದ್ದು, ಬೆಂಗಳೂರು ಜಲ ಮಂಡಳಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಬೊಮ್ಮನಹಳ್ಳಿ ವಲಯದ 110 ಹಳ್ಳಿಗಳಿಗೆ ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆ ಅಡಿಯಲ್ಲಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಮಾರುತಿ ಲೇಔಟ್ ಮತ್ತು ಬಸಾಪುರ ಗ್ರಾಮದಲ್ಲಿ ಬೆಂಗಳೂರು ಜಲಮಂಡಲಿ ವತಿಯಿಂದ ಕಾವೇರಿ ಕುಡಿಯುವ ನೀರಿನ ಕೊಳವೆಗಳನ್ನು ಈಗಾಗಲೇ ಅಳವಡಿಸಲಾಗಿರುತ್ತದೆ. ಸದರಿ ಪ್ರದೇಶಕ್ಕೆ ಕಾವೇರಿ 5ನೇ ಹಂತದ ಕಾಮಗಾರಿಯು ಪೂರ್ಣಗೊಂಡ ನಂತರ ಅಂದರೆ 2023-24ರ ಅಂತ್ಯಕ್ಕೆ ಕಾವೇರಿ ನೀರು ಸರಬರಾಜು ಮಾಡಲು ಯೋಜಿಸಲಾಗಿದೆ. ಬೆಂಗಳೂರು ಜಲಮಂಡಲಿ ವತಿಯಿಂದ ಒಳಚರಂಡಿ ಕಾಮಗಾರಿಯು ಸದರಿ ಪ್ರದೇಶದಲ್ಲಿ ಪ್ರಗತಿಯಲ್ಲಿದ್ದು, ಮಾರುತಿ ಬಡಾವಣೆಯಲ್ಲಿ ಈಗಾಗಲೇ ಚಾಲ್ತಿಯಲ್ಲಿದ್ದ ಒಳಚರಂಡಿ ವ್ಯವಸ್ಥೆಯು ಕಾರ್ಯನಿರ್ವಹಿಸುತ್ತಿದ್ದು, ಕಾವೇರಿ 5ನೇ ಹಂತದ ಕಾಮಗಾರಿ ಅಡಿಯಲ್ಲಿ ನಿಗಧಿತ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಒಳಚರಂಡಿ ಕೊಳವೆಯನ್ನು ಅಳವಡಿಸಲು ಯೋಜಿಸಲಾಗಿರುತ್ತದೆ.

. . .3/-

ಈ	ಬಂದಿದ್ದಲ್ಲಿ, ಕಾವೇರಿ ಕುಡಿಯುವ ನೀರು ಸರಬರಾಜು ಮತ್ತು ಶುದ್ಧ ನೀರಿನ ಘಟಕ ಹಾಗೂ ಚರಂಡಿ ವ್ಯವಸ್ಥೆ ಯಾವಾಗ ಕಲ್ಪಿಸಿಕೊಡಲಾಗುವುದು?	ಕುಡಿಯುವ ನೀರಿನ ಕೊಳವೆಗಳನ್ನು ಈಗಾಗಲೇ ಅಳವಡಿಸಲಾಗಿದ್ದು, ಸದರಿ ಪ್ರದೇಶಕ್ಕೆ ಕಾವೇರಿ 5ನೇ ಹಂತದ ಕಾಮಗಾರಿಯು ಪೂರ್ಣಗೊಂಡ ನಂತರ ಅಂದರೆ 2023-24ರ ಅಂತ್ಯಕ್ಕೆ ನೀರು ಸರಬರಾಜು ಮಾಡಲಾಗುತ್ತದೆ. ಶುದ್ಧ ನೀರಿನ ಘಟಕಗಳ ಕಾಮಗಾರಿಯನ್ನು 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಟೆಂಡರ್ ಪೂರ್ವ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ನೀರು ಸರಬರಾಜು ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಚರಂಡಿ ನಿರ್ಮಾಣ ಕಾಮಗಾರಿಗಳು 110 ಹಳ್ಳಿಗಳ ಅಭಿವೃದ್ಧಿ ಅನುದಾನದಲ್ಲಿ ಸೇರ್ಪಡೆಗೊಂಡಿದ್ದು, ಟೆಂಡರ್ ಪ್ರಕ್ರಿಯೆಯು ಚಾಲನೆಯಲ್ಲಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತದೆ.

ಸಂಖ್ಯೆ: ಸಅಇ 273 ಎಂಎನ್‌ವೈ 2021 (ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ